Sri V. L. Patil (Minister for Revenue) .—Sir; I beg to move.

"That leave be granted to introduce the Registration (Karnataka Amendment) Bill, 1984".

ಶ್ರೀ ಗೋವಿಂದ ಪಿ. ಒಡೆಯರಾಜ್.—334 ಏನಾಯಿತು ?

ಅಧ್ಯಕ್ಷರು.—ನಾಳೆ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೇನೆ. ನೀವು ಯಾರೂ ಇರಲಿಲ್ಲ ಎಂಬ ಕಾರಣಕ್ಕಾಗಿ ನಾಳೆ ತೆಗೆದು ಕೊಳ್ಳುತ್ತೇನೆಂದು ಹೇಳಿದ್ದೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ರೈತರ ವಿಷಯ ಬಹಳ ಮುಖ್ಯವಾದುದು.

Mr. Speaker.—The question is :

"That leave be granted to introduce the Registration (Karnataka Amendment) Bill, 1984"

The Motion was adopted and the leave was granted.

ಶ್ರೀ ಗೋವಿಂದ ಪಿ. ಒಡೆಯರಾಜ್.—334ನ್ನು ನಾಳೆ ತೆಗೆದು ಕೊಳ್ಳುತ್ತಿರಾ ?

ಅಧ್ಯಕ್ಷರು.—ನಾನು ಈಗಾಗಲೇ ಹೇಳಿದ್ದೇನೆ, ನಾಳೆ ತೆಗೆದು ಕೊಳ್ಳುತ್ತೇನೆ. ಯಾರೂ ಇರಲಿಲ್ಲ ಎಂಬ ಕಾರಣದಿಂದ ನಾಳೆ ತೆಗೆದುಕೊಳ್ಳೋಣ ಎಂದು ತೀರ್ಮಾನ ಮಾಡಿದೆ. ನನಗೇನು ಗೊತ್ತು ನೀವು ವಾಪಸ್ ಬರುತ್ತೀರಿ ಎಂದು. ಹೇಳಿ ಹೋಗಬೇಕಾಗಿತ್ತು.

ಶ್ರೀ ಎನ್. ಚಿಕ್ಕೇಗೌಡ.—ನಾವು ಬರುವುದರೊಳಗಾಗಿ ನೀವು ತೀರ್ಮಾನ ಮಾಡಿದ್ದೀರಿ.

ಶ್ರೀ ವೈ. ರಾಮಕೃಷ್ಣ.—334ರಲ್ಲಿ ಬಹಳ ಮುಖ್ಯವಾದ ವಿಚಾರಗಳಿವೆ. ಕೊಲೆಯಾಗಿರುವ ವಿಚಾರವನ್ನು ಹೇಳಿದ್ದಾರೆ.

ಅಧ್ಯಕ್ಷರು.—ಅವನ್ನು ಸಪ್ರೆಸ್ ಮಾಡಬಾರದೆಂದೇ ನಾಳೆಗೆ ಹಾಕಿದ್ದೇನೆ. ಈಗ ಲೆಜಿಸ್ಲೇಟೀವ್ ಬಿಸಿನಿಸ್ ತೆಗೆದುಕೊಂಡಿದ್ದೇನೆ. ಮತ್ತೆ ಈಗ ಒಂದೆ ಹೋಗುವುದಕ್ಕಾಗುವುದಿಲ್ಲ.

ಶ್ರೀ ವೈ. ರಾಮಕೃಷ್ಣ.—ಪ್ರಾಮುಖ್ಯವಾದ ವಿಚಾರ ಎತ್ತಿದ್ದಾರೆ,

Mr. Speaker.—I cannot go back. Please forgive me.

The Mysore (Religious and Charitable) Inams Abolition (Karnatake Amendent) Bill, 1984

Motion to consider

Sri V. L. Patil (Minister for Revenue).—Sir, I beg to move.

"That the Mysore (Religious and Charitable) Inams Abolition (Karnataka Amendment) Bill, 1984 be taken into consideration.

The question was proposed.

ಶ್ರೀ ವಿ. ಎಲ್. ಪಾಟೀಲ್.—ಅಧ್ಯಕ್ಷರೇ, ದೇವಸ್ಥಾನಗಳಿಗೆ ಕೊಡುತ್ತಿದ್ದಂತಹದ್ದು ಹಣ ಫೈವ್ ಟೈಮ್ಸ್ ಇರಬೇಕೆಂದು ಸೇಳಿ, 1979ರಿಂದ ತಂದೆ ನಂತರ ಅವರಿಗೆ ಹೋಗುವ ಹಣ ಕಡಿಮೆ ಯಾಯಿತು. ಇದರಿಂದಾಗಿ ಅವರಿಗೆ ಬಹಳ ಕಡಿಮೆ ಹಣ ಸಿಗುತ್ತಾ ಇದೆ. ಆದ್ದರಿಂದ ಅದನ್ನು ಮೊದಲಿನ ಹಾಗೆ ತರುವುದಕ್ಕೆ ಈ ತಿದ್ದುಪಡಿಯನ್ನು ತಂದಿದ್ದೇವೆ.

ಶ್ರೀ ವೈ. ರಾಮಕೃಷ್ಣ.—ಮೊದಲು ಫೈವ್ ಟೈಮ್ಸ್ ಎಂದು ಇದ್ದುದನ್ನು ಈಗ ಟೆನ್ ಟೈಮ್ಸ್ ಎಂದು ಮಾಡಿದ್ದೀರಿ.

Mr. Speaker.—I will now put the consideration Motion to the vote of the House. The question is :

"That the Mysore (Religious and Charitable) Inams Abolition (Karnataka Amendment) Bill, 1984 be taken into consideration."

The Motion was adopted

Mr. Speaker.—I will now take up clause by clause consideration of the Bill.